21 ವಿಷಯ ಕೃಷ್ಣ ನದಿಯ ಹಿನ್ನೀರಿನ ಬಳಕೆಗೆ ಪರವಾನಗಿ ನೀಡುವ ಕುರಿತು

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) ಮಾನ್ಯ ಅಧ್ಯಕ್ಷರೆ, ಕೃಷ್ಣ ನದಿ ಹಿನ್ನೀರಿನಿಂದ ರೈತರ ಹೊಲಗಳಿಗೆ ನೀರು ಉಪಯೋಗಿಸಿಕೊಳ್ಳಲು ಈ ಮೊದಲು ಚೀಫ್ ಇಂಜಿನಿಯರ್ (ಆಲಮಟ್ಟಿ) ಅವರು ಪರವಾನಗಿ ಕೊಡುತ್ತಿದ್ದರು ಆದರೆ ಕಳೆದ ಎರಡು ವರ್ಷಗಳಿಂದ ಸರ್ಕಾರ ಅದನ್ನು ರದ್ದುಪಡಿಸಿ ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಬೆಂಗಳೂರು ಇವರಿಂದ ಪಡೆಯಬೇಕೆಂದು ನಿಗದಿಪಡಿಸಿದೆ

ಆದಕಾರಣ ಪ್ರತಿಯೊಬ್ಬ ರೈತರೂ ಈ ಪರವಾನಗಿಯನ್ನು ಪಡೆಯಲು ಬೆಂಗಳೂರಿಗೆ ಬರಲು ಸಾಧ್ಯವಿಲ್ಲ ಆದಕಾರಣ ರೈತರಿಗೆ ಆಗುವ ತೊಂದರೆಯನ್ನು ನಿವಾರಣೆ ಮಾಡಲು ತಾವು ದಯವಿಟ್ಟು ಈ ಮೊದಲೇ ಏನು ವ್ಯವಸ್ಥೆ ಇತ್ತೋ ಅದೇ ರೀತಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ ಏಕೆಂದರೆ ಸುಮಾರು ವರ್ಷಗಳಿಂದ ಪರವಾನಗಿ ಪಡೆಯಲು ಕೊಟ್ಟಂಥ ಅರ್ಜಿಗಳು ಪೆಂಡಿಂಗ್ ಇರುವುದರಿಂದ ರೈತರಿಗೆ ತೊಂದರೆಯಾಗಿದೆ ಆದಕಾರಣ ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂಥ ವಿಷಯದ ಬಗ್ಗೆ ಸರ್ಕಾರ ಗಮನ ಹರಿಸುತ್ತದೆ

ಶ್ರೀ ಗೋವಿಂದ ಎಂ ಕಾರಜೋಳ್ ಮಾನ್ಯ ಅಧ್ಯಕ್ಷರೆ, ವಾಟರ್ ವಿಚಾರದಲ್ಲೂ ಪರ್ಮಿಶನ್ ತೆಗೆದುಕೊಳ್ಳಲು ಬೆಂಗಳೂರಿಗೆ ಹಾಲಿ ವ್ಯವಸ್ಥೆಯಲ್ಲಿ ಬರಬೇಕಾಗಿದೆ ಅದಕ್ಕೆ ನಾನು ಏನು ಹೇಳುತ್ತೇನೆಂದರೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಲಿವಲ್‌ನಲ್ಲಿಯೇ ವಾಟರ್ ಪರ್ಮಿಶನ್ ಕೊಡುವಂತೆ ಆಗಬೇಕು ಅದನ್ನು ಬಿಟ್ಟು ಇದಕ್ಕಾಗಿ ವಿಧಾನ ಸೌಧಕ್ಕೆ ಏಕೆ ಬರುವಂತಾಗಬೇಕು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡೋಣ

22 ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಹಾಗೂ ಬಿರುಗಾಳಿಯಿಂದ ಮನೆಗಳು ಹಾಗೂ ವಿದ್ಯುತ್ ಕಂಬಗಳು ಬಿದ್ದು ಸಾರ್ವಜನಿಕರಿಗೆ ತೊಂದರೆಯಾಗಿರುವುದರ ಬಗ್ಗೆ

ಶ್ರೀ ಕೆ ರಘುಪತಿ ಭಟ್ (ಉಡುಪಿ) ಮಾನ್ಯ ಅಧ್ಯಕ್ಷರೆ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರ್ನಾಲ್ಕು ದಿವಸಗಳಿಂದ ವ್ಯಾಪಕವಾಗಿ ಮಳೆ ಹಾಗೂ ಬಿರುಗಾಳಿ ಬಂದು ಬಹಳಷ್ಟು ಮನೆಗಳು, ವಿದ್ಯುತ್ ಕಂಬಗಳು ಹಾನಿಗೊಳಗಾಗಿವೆ ಮರಗಳು ಬಿದ್ದು ಸಾರ್ವಜನಿಕರಿಗೆ ತೊಂದರೆಯಾಗಿದೆ ನನ್ನ ಉಡುಪಿ ಕ್ಷೇತ್ರದಲ್ಲಿ ಎರಡು ಶಾಲೆಗಳ ಮೇಲೆ ಮರ ಬಿದ್ದು ಆ ಎರಡು ಶಾಳೆಗಳಿಗೂ ಬಹಳ ಹಾನಿಯಾಗಿದ್ದು ಶಾಲೆಯನ್ನು ನಡೆಸುವುದಕ್ಕೇ ಆಗದ ಪರಿಸ್ಥಿತಿ ನಿರ್ಮಾಣವಾಗಿದೆ ನಮ್ಮ ಜಿಲ್ಲೆಗೆ ಬರ ಪರಿಹಾರ ನಿಧಿಯಿಂದ ಯಾವುದೇ ಪರಿಹಾರ ಸಿಗುವುದಿಲ್ಲ ಆದುದರಿಂದ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಕನಿಷ್ಠ ಮೂರು ಕೋಟಿ ರೂಪಾಯಿಗಳನ್ನಾದರೂ ಸರ್ಕಾರ ತುರ್ತಾಗಿ